**<u>ದಿ:19.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು:-</u>**ವಾದಿ ಪರ ಶ್ರೀ.**B.S.,** ವಕೀಲರಿಂದ:-

ನನ್ನ ತಕರಾರಿಗೇ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ವಾದಿಗಳು ಈ ದಾವೆಯಲ್ಲಿ ಯಾವ ಯಾವ ದಾಖಲೆಗಳನ್ನು ಸಲ್ಲಿಸಿರುವ ನನಗೆ ಗೋತ್ತಿರುವುದಿಲ್ಲ . ನಾನು ಈ ದಾವೆಗೆ ಸಲ್ಲಿರುವ ಕಂದಾಯ ರಶೀದಿ ದಾಖಲೆಗಳು ನಮ್ಮ ಅಜ್ಜನಾದ ಜೂಗಲು ಹನುಮಂತಪ್ಪ ರವರ ಹೆಸರಿಗೆ ಇರುತ್ತದೆ . ನಮ್ಮ ಅಜ್ಜ ಹನುಮಂತಪ್ಪ ರವರು ಮರಣಾ ನಂತರ ನಮ್ಮ ಚಿಕ್ಕಪ್ಪ ಜೆ ಹೆಚ್ ಕೃಷ್ಣ ಮೂರ್ತಿ ರವರ ಹೆಸರಿಗೆ ಕಂದಾಯ ದಾಖಲೆ ಬದಲಾವಣೆ ಆಗಿರುತ್ತದೆ . ನಿಡಿ 12 ಮತ್ತು 13 ರಶೀದಿಗಳು ನಮ್ಮ ಅಜ್ಜರ ಹೆಸರಿಗೆ ಇರುತ್ತವೆ . ನನ್ನ ಅಜ್ಜನ ಹೆಸರು ಜೂಗಲು ಹನುಮಂತಪ್ಪ ಇರುತ್ತದೆ . ನಮ್ಮ ಗ್ರಾಮದಲ್ಲಿ ಹನಮಂತಪ್ಪ ಎಂಬುವವರು ಬಹಳ ಜನ ಇರುತ್ತಾರೆ ಎಂದರೆ ಸರಿ. ನಿಡಿ 12 ಮತ್ತು 13 ದಾಖಲೆಯಲ್ಲಿ ಜೂಗಲು ಹನುಮಂತಪ್ಪ ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ನಮ್ಮ ಚಿಕ್ಕಪ್ಪರವರ ಹೆಸರಿಗೆ ಕಂದಾಯ ದಾಖಲೆಗಳು ಬದಲಾವಣೆ ಆದ ಬಗ್ಗೆ ನಾನು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ . ನಾನು ಕಂಾದಯ ಕಟ್ಟಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ . ನಮ್ಮ ಅಜ್ಜ ಜೂಗಲು ಹನುಮಂತಪ್ಪ ರವರು ಸನ್ 1979 ರಲ್ಲಿ ಮರಣಹೊಂದಿರುತ್ತಾರೆ . ನಾವು ನಮ್ಮ ಅಜ್ಜ ತೀರಿಹೋದ ನಂತರ ವಾರಸುದಾರರ ಖಾತೆಗಳನ್ನು ಮಾಡಿಸಿಕೊಂಡಿರುವುದಿಲ್ಲ . ನಾನು ನಮ್ಮ ಚಿಕ್ಕಪ್ಪ ಅವರ ಹೆಸರಿಗೆ ಖಾತೆ ನೀಡಿರುತ್ತೇನೆ , ಕಂದಾಯ ರಶೀದಿ ನೀಡಿರುವುದಿಲ್ಲ . ನಮ್ಮ ಚಿಕ್ಕಪ್ಪ ಕೃಷ್ಣಮೂರ್ತಿ ರವರು ಹೆಸರಿಗೆ ಸನ್ 2020 ರಲ್ಲಿ ಖಾತೆ ಆಗಿರುತ್ತದೆ . ಅವರು ಮರಣಹೊಂದಿ ಈ ಸುಮಾರು 3 ವರ್ಷ ಆಗಿರುತ್ತದೆ . ನಮ್ಮ ಅಜ್ಜ ಜೂಗಲು ಹನುಮಂತಪ್ಪ ಅವರ ಹೆಸರಿನಿಂದ ನಮ್ಮ ಚಿಕ್ಕಪ್ಪ ಕೃಷ್ಣಮೂರ್ತಿ ರವರ ಹೆಸರಿಗೆ ಖಾತೆ ಬದಲಾವಣೆಯನ್ನು ನಮ್ಮ ತಂದೆಯವರು ತೀರಿಹೋದ ನಂತರ ಮಾಡಿಸಿರುತ್ತೇವೆ . ಸದರಿ ನಮ್ಮ ಅಜ್ಜ ಜೂಗಲು ಹನಮಂತಪ್ಪ ರವರ ಮರಣ ನಂತರ ಅವರ ಮಕ್ಕಳು ಖಾತೆ ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ . ನಾವು ಖಾತೆ ಬದಲಾವಣೆ ಮಾಡಲು ಪ್ರಯತ್ನ ಪಟ್ಟಿರುವುದಿಲ್ಲ . ದಾವಾ ಆಸ್ತಿಗೂ ನಮ್ಮ ಆಸ್ತಿಗೂ ಯಾವುದೇ

ಸಂಬಂದಿ ಇರುವುದಿಲ್ಲ ಎಂದರೆ ಸರಿ. ನಿಡಿ 3 ಪಂಚಾಯತಿ ಲೀಸ್ಟ್ ನಲ್ಲಿ 54/1 ಮತ್ತು 54/2 ಎಂದು ನಮೂದಾಗಿರುವ ರಾಮಣ್ಣ ರವರು ವಾದಿ ಇರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ಸದರಿ 54/1 ಮತ್ತು 54/2 ಮನೆಗಳ ಆಸ್ತಿ ಇರುತ್ತವೆ ಎಂದು ಹೇಳುತ್ತಾರೆ . ಸದರಿ 54/1 ರಲ್ಲಿ ಮನೆ ಕಟ್ಟಿ , 54/2 ರಲ್ಲಿ ವಾದಿಯು ದನದ ಕೊಟ್ಟಿಗೆ ಇರುತ್ತದೆ ಎಂದರೆ ಸರಿಯಲ್ಲ. ನಮಗೂ ಮತ್ತು ವಾದಿಯಮನೆ ಮುಂದೆ ಇರುವ ಕೊಟ್ಟಿಗೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರೆಸಿ ಕೊಟ್ಟಿಗೆ ಇರುವುದಿಲ್ಲ ಎಂದು ಹೇಳುತ್ತಾರೆ . 54/1 ರಲ್ಲಿ ಮನೆ ಕಟ್ಟಿಕೊಂಡು ವಾದಿ ಇರುತ್ತಾರೆ ಎಂದರೆ ಸಾಕ್ಷಿ ವಾದಿಯು ಮತ್ತು ಅವರ ತಮ್ಮ ಹನುಮಂತಪ್ಪ ರವರು ಇಬ್ಬರು ವಿಭಾಗ ಮಾಡಿಕೊಂಡಿರುತ್ತಾರೆ 54/1 ಮತ್ತು 54/2 ರಲ್ಲೂ ಮನೆ ಕಟ್ಟಿಕೊಂಡಿರುತ್ತಾರೆ ಎಂದು ಹೇಳುತ್ತಾರೆ . ನಿಪಿ 7 ಇಸಿಯಲ್ಲಿ 54/1 , 11 ಮೊಳ X 21 ಮೊಳ ಮನೆ , 22 X 36 ಅಡಿ ಖಾಲಿ ಜಾಗ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಾಗಕ್ಕೆ ನಮಗೆ ಯಾವುದೇ ಅಭ್ಯಂತರ ಇರುವುದಿಲ್ಲ ಎಂದರೆ ಸಾಕ್ಷಿ ವಾದಿಯ ಖಾತೆ ನಂಬರ್ 20 ಇರುತ್ತದೆ ನಮ್ಮ ಖಾತಾ ನಂಬರ್ 18 ಇದ್ದು , ವಿಸ್ತೀರ್ಣ 8 X 8 ಗಜ ಇರುತ್ತದೆ . ಸದರಿ ನಮ್ಮ ವಿಸ್ತೀರ್ಣ 8 X 8 ಗಜದ ಜಾಗಕ್ಕೆ ನಮ್ಮ ಮಾವ ಗುರಪ್ಪ ರವರು ಈ ಹಿಂದೆ ಸನ್ 2002 ರಲ್ಲಿ ದಾವೆ ಹಾಕಿರುತ್ತಾರೆ ಎಂದರೆ ಗೋತ್ತಿಲ್ಲ . ಸದರಿ ದಾವೆಯು ವಜಾ ಆದ ಮೇಲೆ ನಾನು ವಾದಿಗಳ ಆಸ್ತಿಗೆ ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 14 ಪೋಟೋ ಕಾಣುವ ಮನೆ ಮತ್ತು ಖಾಲಿ ಜಾಗ ವಾದಿದು ಇರುತ್ತದೆ ಎಂದರೆ ಸರಿ. ನಿಪಿ 13 ರಲ್ಲಿ ಮನೆ ಮತ್ತು ಕೊಟ್ಟಿಗೆ ಇರುತ್ತದೆ ಎಂದರೆ ಸರಿ. ನಿಪಿ 13 ರ ಪೋಟೋದಲ್ಲಿ ಕಾಣುವ ಕೊಟ್ಟಿಗೆಯನ್ನು ಹೋಡೆದು ವಾದಿಯವರು ಮನೆಯನ್ನು ಕಟ್ಟಲು ಪ್ರಯತ್ನ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಂದರ್ಭದಲ್ಲಿ ನಾನು ವಾದಿಗೆ ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಿಪಿ 13 ಪೋಟೋದಲ್ಲಿ ಕಾಣುವ ಕೊಟ್ಟಿಗೆ ತಗೆದು ವಾದಿ ಮನೆಕಟ್ಟಿಕೊಂಡರೆ ನನಗೆ ತೊಂದರೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ವಾದಿಗೆ ಮೊದಲಿಗೆ 5 ಅಡಿ ಕೊಟ್ಟಿಗೆ ಇತ್ತು , ಈಗ 22 ಅಡಿ ಇದೆ ಎಂದು ದಾವೆ ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ . ದಾವಾ ಆಸ್ತಿ 22 X 36 ಅಡಿಗಳು ಇದ್ದು ಅದಕ್ಕೆ ನನ್ನ ತಕರಾರು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಗ್ರಾಮದಲ್ಲಿ

ಪಂಚಾಯತಿ ಸದಸ್ಯರು ಪರಿಚಯ ಇರುತ್ತಾರೆ ಎಂದರೆ ಸರಿ. ನಾನು ರಾಜಕೀಯದಲ್ಲೂ ಸಹ ಒಡಾಡಿಕೊಂಡು ಇರುತ್ತೇನೆ ಎಂದರೆ ಸರಿಯಲ್ಲ. ವಾದಿಯು ದಾವೆ ಹಾಕುವ ಮುಂಚೆ ನಾನು ತಕರಾರು ಮಾಡಿರುತ್ತೇನೆ ಎಂದು ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಾನು ಪೋಲಿಸರು ಕರೆದಾಗ ಪೋಲೀಸ್ ಠಾಣೆಗೆ ಹೋಗಿರುತ್ತೇನೆ , ಪೋಲಿಸರು ಅಳತೆ ಮಾಡಿ ಕೊಟ್ಟಿರುತ್ತಾರೆ , ಆದರೆ ವಾದಿಯ ಒಪ್ಪದೆ ಈ ದಾವೆ ಸಲ್ಲಿಸಿರುತ್ತಾರೆ . ನಾನು ವಾದಿಯ ವಿರುದ್ದ ವೈಶ್ಯಮ್ಯ ಇರುವ ಕಾರಣ ಸುಳ್ಳು ತಕರಾರು ಸಲ್ಲಿಸಿ, ಸುಳ್ಳು ದಾಖಲೆಗಳನ್ನು ನೀಡಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯವರಿಗೆ ಸುಖಾಸುಮ್ಮನೆ ನಾನು ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಹೆಸರಿಗೆ ಆಸ್ತಿ ಇರುವ ಬಗ್ಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ವಾದಿಯ ಆಸ್ತಿಗೆ ತಕರಾರು ಪಡಿಸಲು ಯಾವುದೇ ಅಧಿಕಾರ ಇರುವುದಿಲ್ಲ . ವಾದಿಯ ಸ್ವಾಧೀನಕ್ಕೆ ಅಡ್ಡಿಪಡಿಸಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು